ಎಲ್ಲಾ ಖಾಲಿಯಾಗುತ್ತಿದೆ. ಆದ್ದರಿಂದ ಆ ವಾಟರ್ ಟ್ಯಾಂಕ್‌ನ್ನೂ ಕೂಡ ಜನಸಂಖ್ಯೆಗೆ ಅನುಗುಣವಾಗಿ, ಅದನ್ನು ಬದಲಾವಣೆಯನ್ನಾಗಿ ಮಾರ್ಪಡಿಸಬೇಕು. ಇದರ ಜೊತೆಗೆ ಮೊನ್ನೆ ಅವಿನ್ಯೂರಸ್ತೆಯಲ್ಲಿ ನಾಮ ಫಲಕಗಳನ್ನು ಹೊಡೆದು ಹಾಕಿರುವ ಪರಿಣಾಮದಿಂದಾಗಿ ಬಹಳ ದೊಡ್ಡ ಗಲಾಟೆಯಾಯಿತು ಎನ್ನುವ ವಿಷಯವನ್ನೂ ಕೂಡ ನಾನು ಕೇಳಿದ್ದೇನೆ. ತಾವು ಇದರ ಬಗ್ಗೆ ಉತ್ತರ ಕೊಡಿಸುತ್ತೇನೆಂದು ಹೇಳಿದಿರಿ, ಇನ್ನು ಆ ಬಗ್ಗೆ ಉತ್ತರ ಕೊಡಿಸಿಲ್ಲ... ದಯಮಾಡಿ ಅದರದು ಹಾಗೂ ಈ ವಾಟರ್ ಸಪ್ಲೈದು ಎರಡಕ್ಕೆ ಉತ್ತರ ಕೊಡಿಸಿ.

ಅಧ್ಯಕ್ಷರು: ನೋಡಿ ಆ ವಿಷಯವೇ ಬೇರೆ ಈ ವಿಷಯವೇ ಬೇರೆ. ಅದನ್ನೂ ಕೂಡ ಉತ್ತರ ಕೊಡಿಸುತ್ತೇನೆ. ಈಗ ಮೊದಲನೆಯದಾಗಿ ವಾಟರ್‌ದ್ದು ನಂತರ ನಾಮಫಲಕದ್ದು ನಿಧಾನಕ್ಕೆ ಕೊಡಿಸೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಅಧ್ಯಕ್ಷರೆ ಮೂರು ವಿಧಾನ ಸಭಾ ಕ್ಷೇತ್ರಗಳಾದ ಚಾಮರಾಜಪೇಟೆ, ಚಿಕ್ಕಪೇಟೆ, ಗಾಂದಿನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ಈ ವಿಷಯವನ್ನು ತಂದಿದ್ದಾರೆ. ಇದು ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಖಾತೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಹಾಗೂ ಜಲಮಂಡಳಿ ಅಧ್ಯಕ್ಷರ ಜೊತೆ ನಾನು ಖುದ್ದಾಗಿ ಮಾತನಾಡಿ, ಈ ಮೂರು ಕ್ಷೇತ್ರಗಳಿಗೆ ಕುಡಿಯುವ ನೀರಿನ ಸರಬರಾಜಿಗೆ ತುರ್ತಾಗಿ ಕ್ರಮ ಕೈಗೊಳ್ಳುವಂತೆ ಪ್ರಯತ್ನ ಮಾಡುತ್ತೇನೆ. ಹಾಗೂ ಮಾನ್ಯ ಸದಸ್ಯರು, ಮಿನಿವಾಟರ್ ಸ್ಕೀಮ್ ಹಾಗೂ ಬೋರ್‌ವೆಲ್‌ಗಳ ರಿಪೇರಿ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಕೂಡ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ.ನವರು ಕೆ.ಇ.ಬಿ.ಗೆ ಸುಮಾರು 128 ಕೋಟಿ ರೂ.ಗಳನ್ನು ಬಾಕಿ ಕೊಡತಕ್ಕಂಥದ್ದು ಇದೆ. ಹೀಗಿದ್ದರೂ ಕೂಡ ನಾವು ವಿದ್ಯುತ್ ಸರಬರಾಜು ನಿಲ್ಲಿಸಿಲ್ಲ, ಒಂದು ಪಕ್ಷ ಆ ರೀತಿ ಆಗಿದ್ದರೆ ಅದನ್ನು ಸರಿಪಡಿಸಿ ಕೊಡುತ್ತೇನೆ ಎನ್ನುವ ಭರವಸೆ ಕೊಡುವುದಷ್ಟೇ ಅಲ್ಲದೆ ಅದನ್ನು ಮಾಡಿಸುತ್ತೇನೆ.

(ಕ) ಶಿಕಾರಿಪುರ ವಿಧಾನ ಸಭಾಕ್ಷೇತ್ರದಲ್ಲಿ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಉಪನ್ಯಾಸಕರನ್ನು ನೇಮಿಸುವ ಬಗ್ಗೆ

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಅಧ್ಯಕ್ಷರೆ, ನನಗೆ ಇದನ್ನು ಮಾತನಾಡುವುದಕ್ಕೆ ಸಂಕೋಚವಾಗುತ್ತದೆ. ಮಾನ್ಯ ಗೋವಿಂದೇಗೌಡರಿಗೆ ಕೂಡ ಹೇಳಿದ್ದೇನೆ. ನನ್ನ ಕ್ಷೇತ್ರದಲ್ಲಿ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಸೈನ್ಸ್ ವಿಭಾಗ ಕೊಟ್ಟು ಒಂದು ವರ್ಷವಾಯಿತು. ಈ ವಿಭಾಗದಲ್ಲಿ ಒಬ್ಬ ಲೆಕ್ಚೆರರ್ ಇಲ್ಲ. ಇದರ ಬಗ್ಗೆ ಎಜ್ಯುಕೇಷನ್ ಸೆಕ್ರೆಟರಿಯವರಿಗೆ ಈಗಾಗಲೇ ಮೂರು ಬಾರಿ ದೂರವಾಣಿ ಮೂಲಕ ಮಾತನಾಡಿ ಹೇಳಿದ್ದೇನೆ. ಹಾಗೂ ಇದರ ಜೊತೆಗೆ ಪತ್ರ ಕೂಡ ಬರೆದಿದ್ದೇನೆ. ನಾನು

ಹೇಳುವುದು ನನ್ನ ಕ್ಷೇತ್ರ ಮಾತ್ರ ಎಂದಲ್ಲ ಯಾವುದೇ ಕ್ಷೇತ್ರ ಇರಬಹುದು, ಒಂದು ವಿಭಾಗಕ್ಕೆ ಸುಮಾರು ವರ್ಷಗಟ್ಟಲೆ, ನಾಲ್ಕೈದು ತಿಂಗಳು ಗಟ್ಟಲೆ ಪೂರ್ಣವಾಗಿ ಒಬ್ಬ ಲೆಕ್ಚರ್ ಇಲ್ಲದೆ ಇದ್ದರೆ, ಆ ಗ್ರಾಮೀಣ ಮಕ್ಕಳ ಭವಿಷ್ಯ ಏನು? ಅವರು ಓದಿ ಪಾಸ್ ಮಾಡುವುದಕ್ಕೆ ಸಾಧ್ಯನಾ? ನಗರದ ಬುದ್ಧಿವಂತ ಮಕ್ಕಳ ಜೊತೆಗೆ ಕಾಂಪಿಟ್ ಮಾಡುವುದಕ್ಕೆ ಸಾಧ್ಯವೇ? ನಾನು ತಮಗೆ, ಹಿಂದಿನದ ಮಂತ್ರಿಗಳಿಗೆ, ಸೆಕ್ರೆಟರಿಗಳಿಗೆ ವಿನಂತಿ ಮಾಡಿದ್ದೆ. ಆದರೆ ಇದುವರೆವಿಗೂ ಏನೂಕ್ರಮ ಕೈಗೊಂಡಿಲ್ಲ; ಕೊನೆಪಕ್ಷ ಒಬ್ಬ ಲೆಕ್ಚರರನ್ನು ಪರ್ಮನೆಂಟಾಗಿ ಹಾಕದೇ ಇದ್ದರೂ ಪಕ್ಕದಲ್ಲಿರುವವರನ್ನು ಡೆಪ್ಯುಟೇಷನ್ ಮೇಲೆ ಹಾಕಿ ವಾರಕ್ಕೆ ಮೂರು ದಿನವಾದರೂ ತರಗತಿಗಳು ನಡೆಯುವಂತೆ ಮಾಡಿ ಎಂದು ಕಳೆದ ಒಂದು ತಿಂಗಳಿನಿಂದ ಹೇಳಿ ಹೇಳಿ ಸಾಕಾಗಿದೆ. ಉತ್ತರ ನಮಗೆ ಸರಿಯಾದ ರೀತಿಯಲ್ಲಿ ಬಂದಿಲ್ಲ. ಮೊನ್ನೆ ಆ ವಿದ್ಯಾರ್ಥಿಗಳೆಲ್ಲರೂ ನನ್ನ ಮನೆಯ ಮುಂದೆ ಧರಣಿ ಕುಳಿತ ಪರಿಣಾಮವಾಗಿ ನನ್ನ ಮನೆಯವರು ಎಲ್ಲರೂ ಮನೆಗೆ ಬೀಗ ಹಾಕಿಕೊಂಡು ಶಿವಮೊಗ್ಗದಿಂದ ಬಂದು ಇಲ್ಲಿ ಇದ್ದಾರೆ. ಸರ್ಕಲ್ ಇನ್ಸ್‌ಪೆಕ್ಟರ್ ಎಲ್ಲಾ ಬಂದು ಅಲ್ಲಿ ಪಂಚಾಯಿತಿ ಮಾಡಿದ್ದಾರೆ. ನಾನು ಕಳೆದ ವಾರ ಹೋಗಿ ಬಂದು...

ಅಧ್ಯಕ್ಷರು: ಧರಣಿಯ ಕಷ್ಟ ತಮಗೆ ಈಗ ಗೊತ್ತಾಯಿತೇ?

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಅನುಭವಿಸುತ್ತಿದ್ದೇನೆ.

ಅಧ್ಯಕ್ಷರು: ಅವರು ನಿಮ್ಮ ಮನೆಗೆ ಬಂದು ಧರಣಿ ಮಾಡಿದಾಕ್ಷಣ ನೀವು ಶಿವಮೊಗ್ಗಕ್ಕೆ ಹೋದಿರಿ, ನೀವು ಇಲ್ಲಿ ಧರಣಿ ಕುಳಿತರೆ ನಾನು ಎಲ್ಲಿಗೆ ಹೋಗಬೇಕು ಹೇಳಿ? ಈಗ ಧರಣಿ ಕಷ್ಟ ಏನು ಎಂಬುದು ತಮಗೆ ಗೊತ್ತಾಯಿತಾ?

ಶ್ರೀ ಬಿ.ಬಿ.ಶಿವಪ್ಪ: ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ, ನಮ್ಮಲ್ಲಿ ಸುಮಾರು 13 ವರ್ಷದಿಂದ ಇಂಗ್ಲೀಷ್ ಲೆಕ್ಚರರ್ ಇಲ್ಲ.

ಅಧ್ಯಕ್ಷರು: ನಿಮ್ಮಲ್ಲಿ ಕಾಫಿ ಪ್ಲಾಂಟೇಷನ್ ಇರುವುದರಿಂದ, ಯೂರೋಪಿಯನ್ ಇನ್‌ಫ್ಲೂಯೆನ್ಸ್ ಇರುವುದರಿಂದ ಅಲ್ಲಿ ಇಂಗ್ಲೀಷ್ ಲೆಕ್ಚರರ್ ಬೇಡ ಎಂದು ಹಾಕಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ಒಬ್ಬ ಸ್ನೇಹಿತರು ಡಾಕ್ಟರ್ ಇದ್ದಾರೆ ಅವರು ಪಾಠಮಾಡುತ್ತೇನೆಂದರು, ಅದೂ ಕೂಡ ಆಗಲಿಲ್ಲ.

ಶ್ರೀ ಮಾಲಾಳ್ ನಾಗರಾಜ್: ಈಗ ನಾನು ಕೂಡ ಆ ಪರಿಸ್ಥಿತಿಯನ್ನು ಪ್ರಸ್ತಾಪ ಮಾಡಿದರೆ, ನಿಮ್ಮ ಹಣೆಬರಹ ಕೂಡ ಹೀಗೆ ಆಯಿತಾ ಎಂದು ನೀವು ಹೇಳುತ್ತೀರಿ. ಅದಕ್ಕೆ ನಾನು ಏಕೆ ನಿಮ್ಮ ಕೈಯಲ್ಲಿ ಬೈಸಿಕೊಳ್ಳಬೇಕೆಂದು ಗಂಭೀರವಾಗಿದ್ದೇನೆ. ಏನೆಂದರೆ ಏನೂ ಇಲ್ಲ, ರಸ್ತೆ, ನೀರು, ಆಸ್ಪತ್ರೆ, ಯಾವುದೂ ಇಲ್ಲ ಈ ಅವ್ಯವಸ್ಥೆ ನಮ್ಮ ಕ್ಷೇತ್ರದಲ್ಲಿ ನಿರಂತರವಾಗಿ ನಡೆಯುತ್ತಿದೆ.

ಅಧ್ಯಕ್ಷರು: ಇಲ್ಲ. ಅವರೇನೂ ಉಪ್ಪಿನವರು ಅಳುತ್ತಾರೆ, ನೀವು ತೆಂಗಿನಕಾಯಿಯವರು ಆದ್ದರಿಂದ ಅಳಬೇಕಾಗಿಲ್ಲ.

ಶ್ರೀ ಸಿ.ಬೈರೇಗೌಡ: ಅಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಕೇಳಿದ್ದನ್ನೆಲ್ಲಾ ಕೊಟ್ಟರೂ ಕೂಡ ಅವರು ಈ ರೀತಿ ಮಾತನಾಡುತ್ತಿದ್ದಾರೆ. ಜಿಲ್ಲೆ ಬೇಕು ಎಂದರು ಜಿಲ್ಲೆ ಕೊಟ್ಟಿದ್ದು ಆಯಿತು, ಅವರಿಗೆ ಸರ್ವಸ್ವವನ್ನು ಕೊಟ್ಟರೂ ಕೂಡ ಅವರಿಗೆ ತೃಪ್ತಿ ಆಗುವುದಿಲ್ಲ...

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಗೋವಿಂದೇಗೌಡರೆ, ನಾನಂತೂ ನನ್ನ ಕ್ಷೇತ್ರದಲ್ಲಿ ನಿಲ್ಲುವ ಸ್ಥಿತಿಯಲ್ಲಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ, ಮುಖ್ಯಮಂತ್ರಿಗಳು ಹಾಗೂ ತಾವು ಅಲ್ಲಿಗೆ ಬಂದು ಬಿಡಿ ಏನಾಗಿದೆ ಎಂಬುದನ್ನು ಪ್ರಾಮಾಣಿಕವಾಗಿ ನೋಡಿ.

(ಖ) ಬೈಂದೂರಿನಲ್ಲಿರುವ ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕರುಗಳನ್ನು ನೇಮಿಸುವ ಕುರಿತು.

ಶ್ರೀ ಐ.ಎಂ.ಜಯರಾಮಶೆಟ್ಟಿ: ಅಧ್ಯಕ್ಷರೆ, ನನ್ನ ಕ್ಷೇತ್ರ ಬೈಂದೂರಿನಲ್ಲಿ ಒಂದು ವಿಜ್ಞಾನ ಕಾಲೇಜು ಇದೆ. ಹಿಂದಿನ ವರ್ಷ ಈ ಕಾಲೇಜಿಗೆ ಅನುಮತಿ ಕೊಟ್ಟಿದ್ದಾರೆ. ಆದರೆ ಕಾಲೇಜು ಇದುವರೆವಿಗೂ ಪ್ರಾರಂಭವಾಗಿಲ್ಲ. ಇವತ್ತಿಗೂ ಲೆಕ್ಚರರ್ ಇಲ್ಲ. ನಾನು 10 ಕಾಗದಗಳನ್ನು ಬರೆದಿದ್ದೇನೆ. ಇವತ್ತಿನವರೆವಿಗೆ ಒಂದು ಸರಿಯಾದ ಉತ್ತರವಿಲ್ಲ. ದಯಮಾಡಿ ಗ್ರಾಮೀಣ ಪ್ರದೇಶದ ಮಕ್ಕಳ ಭವಿಷ್ಯದ ಬಗ್ಗೆ ಯೋಚನೆ ಮಾಡಬೇಕು. ದಯಮಾಡಿ, ಗ್ರಾಮೀಣ ಪ್ರದೇಶದ ಮಕ್ಕಳ ಭವಿಷ್ಯದ ಪ್ರಶ್ನೆ ಇದು...

ಅಧ್ಯಕ್ಷರು: ಒಂದು ನಿಮಿಷ. ಎ.ಆರ್.ಕೃಷ್ಣಮೂರ್ತಿಯವರು.

(ಗ) ಚಾಮರಾಜನಗರದಲ್ಲಿನ ಫಸ್ಟ್‌ಗ್ರೇಡ್ ಕಾಲೇಜಿಗೆ ಉಪನ್ಯಾಸಕರ ನೇಮಕಾತಿ ಕುರಿತು

ಶ್ರೀ ಎ.ಆರ್.ಕೃಷ್ಣಮೂರ್ತಿ (ಸಂತೇಮಾರಹಳ್ಳಿ): ಮಾನ್ಯ ಸಭಾಧ್ಯಕ್ಷರೇ, ನಮ್ಮ ಚಾಮರಾಜನಗರದಲ್ಲಿ ಫಸ್ಟ್‌ಗ್ರೇಡ್ ಕಾಲೇಜು ಪ್ರಾರಂಭವಾಗಿ ಬಹಳ ವರ್ಷಗಳಾಯಿತು. ಆದರೆ ಇಲ್ಲಿಯವರೆಗೂ ಆ ಕಾಲೇಜಿಗೆ ಲೆಕ್ಚರರ್‌ಗಳನ್ನು ನೇಮಕ ಮಾಡಿಲ್ಲ. ಕಾಂಟ್ರಾಕ್ಟ್ ಬೇಸಿಸ್‌ಮೇಲೆ ಕೆಲಸ ಮಾಡತಕ್ಕಂಥ ಲೆಕ್ಚರರ್‌ಗಳನ್ನೂ ಕೂಡ ಇವತ್ತಿನ ದಿವಸ ಇಲಾಖೆಯವರು ವಿತ್‌ಡ್ರಾ ಮಾಡಬೇಕು ಎಂದು ಆದೇಶ ಮಾಡಿರುವುದರಿಂದ ಲೆಕ್ಚರರ್ಸ್ ಇಲ್ಲದೆ ಅಲ್ಲಿ ಪಾಠಪ್ರವಚನಗಳಿಗೆ ಬಹಳ ತೊಂದರೆಯಾಗಿದೆ. ಚಾಮರಾಜನಗರ ಮಾನ್ಯ ವಾಟಾಳ್ ನಾಗರಾಜ್ ಅವರ ಕ್ಷೇತ್ರಕ್ಕೆ ಬರತಕ್ಕಂಥ ಕೇಂದ್ರಸ್ಥಾನ. ಆದರೆ ಇಲ್ಲಿಯವರೆಗೆ ಕೂಡ ಅಲ್ಲಿ ಕಾಲೇಜಿನಲ್ಲಿ